ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,
ಮಧುಗಿರಿ
ಅಸಲು ದಾವಾ ಸಂಖ್ಯೆ: 341/2013.

| | | |
|---|---|---|
| ವಾದಿಗಳು | ವಿರುದ್ಧ | ಪ್ರತಿವಾದಿ |
| ನಾರಾಯಣಪ್ಪ ಪೌತಿವಾರಸು<br>ಲಕ್ಷ್ಮೀದೇವಮ್ಮ ಮತ್ತು ಇತರರು. | | ಹನುಮಪ್ಪ @ ಹನುಮಯ್ಯ |

DW2

ಪ್ರತಿವಾದಿಯ ಪರ ಸಾಕ್ಷಿಯ ಮುಖ್ಯ ವಿಚಾರಣೆಯ ಸಾಕ್ಷ್ಯರೂಪದ ಹೇಳಿಕೆ ಪ್ರಮಾಣ ಪತ್ರದ ಮುಖೇನ

ಸಾಕ್ಷಿದಾರರ ಹೆಸರು: ಪ್ರಭಾಕರ.ಟಿ.ಎಲ್.

ತಂದೆ ಹೆಸರು : ಲೇಟ್ ಲಕ್ಷ್ಮೀನರಸೇಗೌಡ

ವಯಸ್ಸು : 48 ವರ್ಷ

ವಾಸ : ತೊಂಡೋಟಿ ಗ್ರಾಮ, ಐ.ಡಿ.ಹಳ್ಳಿ ಹೋಬಳಿ,
ಮಧುಗಿರಿ ತಾಲ್ಲೂಕು.

ಈ ಮೇಲ್ಕಂಡ ಸಾಕ್ಷಿದಾರನಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ.

ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನಗೆ ಪ್ರತಿವಾದಿ ಗೊತ್ತು. ಮತ್ತು ವಾದಿಗಳು ಸಹ ಗೊತ್ತು. ವಾದಿಗಳು ಮತ್ತು ಪ್ರತಿವಾದಿ ಮತ್ತು ನಾನು ಅಕ್ಕಪಕ್ಕದ ಗ್ರಾಮದವರಾಗಿರುತ್ತೇವೆ. ಪ್ರತಿವಾದಿಯ ತಂದೆ ಸಂಜೀವಪ್ಪ ಇವರು ಬದುಕಿದ್ದ ಸಮಯದಲ್ಲಿ ಹಾಗೂ ವಾದಿಯವರ ತಂದೆ ಕ್ಯಾತಪ್ಪ @ ಕ್ಯಾತಣ್ಣ ಇವರು ಬದುಕಿದ್ದ ಸಮಯದಲ್ಲಿ ದಾವಾ ಷೆಡ್ಯೂಲ್ ಸರ್ವೆನಂಬರ್ 77 ರ ಜಮೀನನ್ನು ಹಾಗೂ ಸರ್ವೆನಂಬರ್ 1/10 ರ ಜಮೀನನ್ನು ಜಂಟಿಯಾಗಿ ಕ್ರಯಕ್ಕೆ ಕೊಂಡುಕೊಂಡು ಸ್ವಾಧೀನದಲ್ಲಿದ್ದು, ಈಗ ಸದರಿಯವರು ಮರಣ ಹೊಂದಿದ್ದು, ವಾದಿಗಳು ಮತ್ತು ಪ್ರತಿವಾದಿ ಇವರು ತಲಾರ್ಧ ಭಾಗದಲ್ಲಿ ಉಳುಮೆ ಮಾಡುತ್ತಿರುತ್ತಾರೆ.

T.L.PrabhaKaR

No 9 Correction - NY

ದಾವಾ ಷೆಡ್ಯೂಲ್ ಸರ್ವೆನಂಬರ್ 21/1, 18/1ಎ.ಪಿ.2, ಸರ್ವೆನಂಬರ್ 35/3, ಸರ್ವೆನಂಬರ್ 35/4 ರ ಜಮೀನುಗಳನ್ನು ಪ್ರತಿವಾದಿಯ ತಂದೆಯವರಾದ ಸಂಜೀವಪ್ಪರವರು ಕ್ರಯಕ್ಕೆ ಕೊಂಡುಕೊಂಡು ಸ್ವಾಧೀನದಲ್ಲಿದ್ದು, ಅನುಭವಿಸಿಕೊಂಡು ಬಂದಿದ್ದು, ಅವರ ಮರಣಾನಂತರ ಈಗ ಪ್ರತಿವಾದಿ ಸದರಿ ಈ ಮೇಲ್ಕಂಡ ದಾವಾ ಷೆಡ್ಯೂಲ್ ಸರ್ವೆನಂಬರ್ ಜಮೀನುಗಳಲ್ಲಿ ಪ್ರತ್ಯೇಕ ಸ್ವಾಧೀನದಲ್ಲಿದ್ದು ಮತ್ತು ಅನುಭವಿಸಿಕೊಂಡು ಬರುತ್ತಿರುತ್ತಾರೆ. ಈ ಮೇಲ್ಕಂಡ ದಾವಾ ಷೆಡ್ಯೂಲ್ ಸರ್ವೆನಂಬರ್ 21/1, ಸರ್ವೆನಂಬರ್ 18/1ಎ.ಪಿ.2, ಸರ್ವೆನಂಬರ್ 35/3 ಮತ್ತು ಸರ್ವೆನಂಬರ್ 35/4 ರ ಜಮೀನುಗಳಲ್ಲಿ ಈ ದಾವೆಯ ವಾದಿಗಳು ಎಂದೂ ಸಹ ಸ್ವಾಧೀನಾನುಭವದಲ್ಲಿರುವುದಿಲ್ಲ. ಸದರಿ ಆಸ್ತಿಗಳು ಹಳೇಇಟಕಲೋಟಿ ಗ್ರಾಮದಲ್ಲಿದ್ದು, ಸದರಿ ಜಮೀನುಗಳ ಸ್ವಲ್ಪ ದೂರದಲ್ಲಿ ನನ್ನ ಜಮೀನು ಇರುತ್ತದೆ. ಮತ್ತು ನಾನು ಪ್ರತಿವಾದಿಯು ಸ್ವಾದೀನದಲ್ಲಿರುವ ಜಮೀನುಗಳಲ್ಲಿ ಕೂಲಿ ಕೆಲಸಕ್ಕೆ ಮತ್ತು ದನಕರುಗಳನ್ನು ಮೇಯಿಸಲು ಹೋಗುತ್ತಿರುವುದರಿಂದ ಹಾಗೂ ನಾನು ದಾವಾ ಆಸ್ತಿಗಳನ್ನು ನೋಡಿರುವುದರಿಂದಲೂ ಈ ಮೇಲ್ಕಂಡ ಎಲ್ಲಾ ವಿಚಾರಗಳು ನನಗೆ ಗೊತ್ತು.

ಈ ಮೇಲೆ ಹೇಳಿದ ಎಲ್ಲಾ ಅಂಶಗಳು ಸತ್ಯವಾಗಿದೆಯೆಂದು ಪ್ರಮಾಣೀಕರಿಸಿ ಈ ಕೆಳಕಂಡಂತೆ ಸಹಿ ಮಾಡಿರುತ್ತೇನೆ

ಗುರುತು ಬಲ್ಲವರು:

[signature] [KSH]

ವಕೀಲರು Roll No-KAR-1759/2003

ಮಧುಗಿರಿ

ದಿನಾಂಕ:23–06–2026

T.L. Prabhakar

ಪ್ರಮಾಣಕರ್ತರು

No. of Correction - Nil

ನನ್ನ ಮುಂದೆ ಪ್ರಮಾಣೀಕರಿಸಿದೆ

[signature] 23/6/2026

ಓ.ಎಸ್.341/2013
ಡಿ.ಡಬ್ಲ್ಯೂ-2

ದಿನಾಂಕಃ **23.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಕೆ.ಎಸ್.ಹೆಚ್. ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿಸಹಿ ಮಾಡಿರುತ್ತೇನೆ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

T.I.L. Prabha IdaR

23/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ